ವಿಜಯವಾಣಿ

ಮಂಗಳೂರು | ಕನ್ನಡಿಗರ ಧ್ವನಿ | 25 ಜನವರಿ 2013 ಶುಕ್ರವಾರ

VIJAYAVANI • MANGALORE

# ಜಟಿಲ ಹೃದಯ ಕವಾಟ ಯಶಸ್ವಿ ಜೋಡಣೆ

**ಉಡುಪಿ:** ಮಹಾ ಅಪಧಮನಿ ಕಸಿ ಜೋಡಣೆ ಶಸ್ತ್ರಚಿಕಿತ್ಸೆ ಅತ್ಯಂತ ಅಪಾಯಕಾರಿಯಾದರೂ, ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ವೈದ್ಯರು ಹೃದಯ ಕವಾಟ ಬದಲಿ ಜೋಡಣೆಯಲ್ಲಿ ಯಶಸ್ವಿಯಾಗಿದ್ದಾರೆ.

ಶಾರದಮ್ಮ (68, ಹೆಸರು ಬದಲಿಸಲಾಗಿದೆ) ಅತ್ಯಂತ ಕಡಿಮೆ ರಕ್ತದೊತ್ತಡ ಮತ್ತು ಎದೆನೋವಿನ ನಿಮಿತ್ತ ಜ.18ರಂದು ಕಸ್ತೂರ್ಬಾ ಆಸ್ಪತ್ರೆ ತುರ್ತುಚಿಕಿತ್ಸಾ ವಿಭಾಗಕ್ಕೆ ದಾಖಲಾಗಿದ್ದರು. ಇವರು ಎ ಪ್ರವರ್ಗದ ಡಿ ಸೆಕ್ಷನ್ ಆಫ್ ಅಯೋಟಾ ವಿತ್ ರಿಗರ್ಜಿಟೋ ಎಂಬ ಕಾಯಿಲೆಯಿಂದ ಬಳಲುತ್ತಿರುವುದನ್ನು ವೈದ್ಯರು ಪತ್ತೆ ಹಚ್ಚಿದರು. ಇದಕ್ಕೆ ಹೃದಯ ಕವಾಟದ ಸೋರುವಿಕೆ ಎಂದು ಹೇಳಲಾಗುತ್ತದೆ.

ಶಾರದಮ್ಮ ಅವರನ್ನು 19ರಂದು ತುರ್ತು ಹೃದಯ ಶಸ್ತ್ರಚಿಕಿತ್ಸೆಗೆ ಒಳಪಡಿಸಲಾಯಿತು. ಹೃದಯದ ಕಿರೀಟ ಕವಾಟ ಬದಲಿಸಲಾಯಿತು. ರೋಗಗ್ರಸ್ತ ಮಹಾಅಪಧಮನಿ ಭಾಗವನ್ನು ತುಂಡರಿಸಿ ತೆಗೆದು ಆ ಭಾಗವನ್ನು ಕಸಿ ಮೂಲಕ ಪುನಃ ಜೋಡಿಸಲಾಯಿತು. ಶಸ್ತ್ರ ಚಿಕಿತ್ಸೆ ನಂತರ ಶಾರದಮ್ಮ ಚೇತರಿಸಿಕೊಳ್ಳುತ್ತಿದ್ದು, ಪ್ರಥಮ ಬಾರಿ ಈ ರೀತಿಯ ಶಸ್ತ್ರ ಚಿಕಿತ್ಸೆಯನ್ನು ಕಸ್ತೂರ್ಬಾ ಆಸ್ಪತ್ರೆಯಲ್ಲಿ ಮಾಡಲಾಗಿದೆ.

ಹೃದಯ ಶಸ್ತ್ರಚಿಕಿತ್ಸೆ ಮೂಲಕ ಇಬ್ಭಾಗವಾದ ಮಹಾಪಧಮನಿ ಭಾಗ ತೆಗೆಯಲಾಗುತ್ತದೆ ಮತ್ತು ಸಂಶ್ಲೇಷಿತ ಕಸಿ ಮೂಲಕ ಆ ಭಾಗ ಹೊಲಿದು ಹೃದಯದಿಂದ ದೇಹದ ಉಳಿದ ಭಾಗಗಳಿಗೆ ರಕ್ತ ಪರಿಚಲನೆ ಸರಾಗವಾಗಿ ನಡೆಸುವಂತೆ ಮಾಡಲಾಗುತ್ತದೆ.

ಶಾರದಮ್ಮ ಅವರಲ್ಲಿ ಕಂಡು ಬಂದ ರೋಗ ಲಕ್ಷಣ ಹೃದಯ ಸ್ತಂಭನ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಲ್ಲಿ ಕಂಡು ಬರುವಂತೆಯೇ ಇರುವುದರಿಂದ ಪತ್ತೆಹಚ್ಚುವುದು ಅತ್ಯಂತ ಕಠಿಣ. ಕಾಯಿಲೆ ಬೇಗನೆ ಪತ್ತೆಹಚ್ಚುವುದರಿಂದ ರೋಗಿಗಳನ್ನು ಸಾವಿನಿಂದ ಪಾರುಮಾಡಬಹುದು. ಕಸ್ತೂರ್ಬಾ ಆಸ್ಪತ್ರೆ ಹೃದಯ ಶಸ್ತ್ರಚಿಕಿತ್ಸಾ ತಜ್ಞ ಡಾ. ಟಾಮ್ ದೇವಾಸಿ ರೋಗ ಪತ್ತೆಹಚ್ಚಿ ತುರ್ತಾಗಿ ಹೃದಯದ ಶಸ್ತ್ರಚಿಕಿತ್ಸೆ ನಡೆಸುವಂತೆ ಸೂಚಿಸಿದನ್ವಯ ಡಾ.ವಾಸುದೇವ ಬಿ. ಪೈ ಶಸ್ತ್ರಚಿಕಿತ್ಸೆ ನಡೆಸಿದರು.

ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ಹೃದಯ ಶಸ್ತ್ರಚಿಕಿತ್ಸಾ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಡಾ। ವಾಸುದೇವ ಬಿ. ಪೈ ಅವರು ಕ್ಲಿಷ್ಟಕರ ಹೃದಯದ ಶಸ್ತ್ರಚಿಕಿತ್ಸೆಯನ್ನು ಡಾ। ಗಣೇಶ್ ಕಾಮತ್ ಮತ್ತು ಡಾ। ಸುಜಿತ್ ಸುವರ್ಣ (ಹೃದಯದ ಶಸ್ತ್ರಚಿಕಿತ್ಸಾ ತಜ್ಞರು) ಹಾಗೂ ಅರಿವಳಿಕೆ ತಜ್ಞ ಡಾ। ಸುನಿಲ್ ಸಾಗರ್ ಮತ್ತು ಪರ್‌ಫ್ಯೂಶನಿಸ್ಟ್ ಶಿವಶಂಕರ ಪೈ ಒಳಗೊಂಡ ತಂಡ ಯಶಸ್ವಿಯಾಗಿ ಶಸ್ತ್ರ ಚಿಕಿತ್ಸೆ ಮಾಡಿದೆ.

ಹೃದಯ ಶಸ್ತ್ರಚಿಕಿತ್ಸೆ ಮೂಲಕ ಇಬ್ಭಾಗವಾದ ಮಹಾಪಧಮನಿ ಭಾಗ ತೆಗೆಯಲಾಗುತ್ತದೆ ಮತ್ತು ಸಂಶ್ಲೇಷಿತ ಕಸಿ ಮೂಲಕ ಆ ಭಾಗ ಹೊಲಿದು ಹೃದಯದಿಂದ ದೇಹದ ಉಳಿದ ಭಾಗಗಳಿಗೆ ರಕ್ತ ಪರಿಚಲನೆ ಸರಾಗವಾಗಿ ನಡೆಸುವಂತೆ ಮಾಡಲಾಗುತ್ತದೆ. ಈ ರೀತಿಯ ಶಸ್ತ್ರಚಿಕಿತ್ಸೆಗೆ ಸುಮಾರು ಒಂದು ವಾರ ರೋಗಿ ಆಸ್ಪತ್ರೆಯಲ್ಲಿ ದಾಖಲಾಗಬೇಕು. ಸಂಪೂರ್ಣವಾಗಿ ಗುಣಮುಖರಾಗಲು ಸುಮಾರು 6 ರಿಂದ 8 ವಾರಗಳ ಹಿಡಿಯುತ್ತದೆ ಎಂದು ಮುಖ್ಯ ವೈದ್ಯಾಧಿಕಾರಿ ಡಾ। ಎಂ. ದಯಾನಂದ ತಿಳಿಸಿದ್ದಾರೆ.